**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ161/2019</u> ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **27.01.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಮುಂದುವರೆದ ಪಾಟಿ ಸವಾಲುಃ** ಪ್ರತಿವಾದಿ ಪರ ಶ್ರೀ **ಪಿ.ಎಸ್** ವಕೀಲರಿಂದಃ</u>

ನಾನು ಮನೆ ಕಟ್ಟಡ ಕಟ್ಟುವ ಮುಂಚೆ ಪರವಾನಿಗೆಯನ್ನು ಪಡೆದಿರುತ್ತೇನೆ ಎಂದರೆ ಸರಿ. ನಿಪಿ-**19** ಕಟ್ಟಡ ಕಟ್ಟುವ ಪರವಾನಿಗೆಯಲ್ಲಿ ಮನೆಯ ಮುಂದೆ **1.5** ಮೀ ಹಾಗೂ ಸುತ್ತಮುತ್ತಲೂ **1** ಮೀ ಸೆಟ್ ಬ್ಯಾಕ್ ಜಾಗವನ್ನು ಬಿಡಬೇಕು ಎಂದು ನಮೂದು ಇರುತ್ತದೆ ಎಂದರೆ ಸರಿ. ಅದೇ ರೀತಿ ಸದರಿ ಪರವಾನಿಗೆಯಲ್ಲಿ ಮಂಜೂರಾದ ಪರವಾನಿಗೆಯಂತೆ ಕಟ್ಟಡವನ್ನು ಕಟ್ಟಬೇಕು ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ತಿ.ನರಸೀಪುರ ಪುರಸಭೆಯಲ್ಲಿ ಅನುಮೋದನೆಗೊಂಡ ಮನೆಯ ನೀಲಿನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.ನಾನು ಕಟ್ಟಡದ ನೀಲಿನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮನೆಯ ಹಿಂಭಾಗದಲ್ಲಿ **1** ಮೀ ಸೆಟ್ ಬ್ಯಾಕ್ ಜಾಗ ಬಿಟ್ಟಿರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

ನಿಪಿ-**8** ಅರ್ಜಿಯನ್ನು ನಾನು ಹಾಗೂ ನಮ್ಮ ಮನೆಯವರು ಮಾತ್ರ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪುರಸಭೆಗೆ ಪ್ರತಿವಾದಿಯ ಗುಡಿಸಲು ತೆರವುಗೊಳಿಸಲು ಯಾವುದೇ ಅರ್ಜಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅರ್ಜಿಯ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-**7** ದಾಖಲೆಯ ಪ್ರಕಾರ ನಾನು ನನ್ನ ಆಸ್ತಿಯನ್ನು ಗಡಿಯನ್ನು ಗುರುತಿಸಿಕೊಳ್ಳಲು ನಾನು ಅರ್ಜಿಯನ್ನು ನೀಡಿರುತ್ತೇನೆ.

ನಿಡಿ-**1** ರಲ್ಲಿ ಕಾಣುವ ಮುಳ್ಳುತಂತಿ ಬೇಲಿ ಗುಡಿಸಲಿನ ಉತ್ತರ ದಿಕ್ಕಿನ ಗೋಡೆಗೆ ನೇರವಾಗಿ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ಅವರ ಆಸ್ತಿಯ ಸಂಪೂರ್ಣ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಮಾತ್ರ ಮುಳ್ಳುತಂತಿ ಹಾಕುತ್ತಾರೆ ಎಂದರೆ ಸರಿ.

ನಾನು ನಮಗೆ ಸೇರಿದ ಜಾಗದ ವಿಸ್ತೀರ್ಣಕ್ಕೆ ಮಾತ್ರ ಮುಳ್ಳುತಂತಿ ಬೇಲಿಯನ್ನು ಹಾಕಿರುತ್ತೇವೆ ಎಂದರೆ ಸರಿ. ನಿಡಿ-2 ಫೋಟೋದಲ್ಲಿ ಕಾಣುತ್ತಿರುವ ಬಿಳಿ ಕಂಪೌಡ ಗೋಡೆ ನಮಗೆ ಸೇರಿರುತ್ತದೆ ಎಂದರೆ ಸರಿ. ನಿಡಿ-1 ರಲ್ಲಿ ತಂತಿ ಬೇಲಿ ಗುಡಿಸಲಿನ ಉತ್ತರದ ಗೋಡೆಗೆ ನೇರವಾಗಿ ಇದ್ದು, ನಿಡಿ-2 ರಲ್ಲಿ ನಾವು ಹೆಚ್ಚಿನ ಜಾಗದಲ್ಲಿ ಒತ್ತುವರಿ ಮಾಡಿಕೊಂಡು ಕಂಪೌಡ ಗೋಡೆಯನ್ನು ನಿರ್ಮಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-2 ರ ಕಂಪೌಡ ಗೋಡೆ ಪಕ್ಕದಲ್ಲಿದ್ದ ಜಾಗ ಸಾರ್ವಜನಿಕ ರಸ್ತೆಯಾಗಿರುತ್ತದೆ ಎಂದರೆ ಸರಿ. ನಿಡಿ-1ರ ತಂತಿ ಬೇಲಿ ಪಕ್ಕದಲ್ಲಿರುವ ಸಿಮೆಂಟ್ ಹಾಕಿರುವ ಜಾಗ ಸಾರ್ವಜನಿಕ ರಸ್ತೆಯಾಗಿರುತ್ತದೆ ಎಂದರೆ ಸರಿ. ನಿಡಿ-1 ರಲ್ಲಿ ಕಾಣುತ್ತಿರುವ ಗುಡಿಸಲಿನ ಮುಂದಿನ ಮೊದಲಿನ ತಂತಿ ಬೇಲಿ ಕಲ್ಲಿನ ಪಶ್ಚಿಮ ದಿಕ್ಕಿಗೆ 4 ಅಡಿ ಜಾಗ ರಸ್ತೆ ಇರುತ್ತದೆ. ನಿಡಿ-2 ರಲ್ಲಿರುವ ನಮ್ಮ ಮನೆಯ ಗೋಡೆ ಪ್ರತಿವಾದಿಯ ಮನೆಯ ಜಿಂಕ್ ಶೀಟ್ ಗೆ ಹೊಂದಿಕೊಂಡಿರುತ್ತದೆ ಎಂದರೆ ಸಾಕ್ಷಿಯು ಸದರಿಯವರೇ ನಮ್ಮ ಮನೆ ಗೋಡೆಗೆ ಸೇರಿ ಜಿಂಕ್ ಶೀಟ್ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮನೆಯನ್ನು ಪಶ್ಚಿಮ ದಿಕ್ಕಿಗೆ 4 ಅಡಿ ರಸ್ತೆ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆಯನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನಾವೇ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಅದನ್ನು ತೆರವುಗೊಳಿಸಬೇಕೆಂದು ಸುಳ್ಳು ದಾವೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನೆಯ ದಕ್ಷಿಣ ದಿಕ್ಕಿನಲ್ಲಿರುವ ಕಿಟಕಿ ಮತ್ತು ಬಾಗಿಲಿನಿಂದ ಸಾಕಷ್ಟು ಗಾಳಿ ಬರುತ್ತದೆ ಎಂದರೆ ಸರಿ. ಅದೇ ರೀತಿ ನಿಪಿ-3 ಫೋಟೋ ಪ್ರಕಾರ ಪಶ್ಚಿಮ ದಿಕ್ಕಿನಲ್ಲಿರುವ ಕಿಟಕಿ ಮತ್ತು ಬಾಗಿಲಿನಿಂದ ಸಾಕಷ್ಟು ಗಾಳಿ ಬರುತ್ತದೆ ಎಂದರೆ ಸರಿ. ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ಅನುಮೋದನೆಗೊಂಡಂತೆ ಕಿಟಕಿ ಇದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

ನಮ್ಮ ಮನೆಯ ಹಿಂಭಾಗದಲ್ಲಿ ಹೊಟ್ಟೆ ಜವರಪ್ಪರವರ ಗುಡಿಸಿಲು ಇರುತ್ತದೆ ಎಂದರೆ ಸರಿ. ಸದರಿಯವರನ್ನು ಆರ್ ಜವರಪ್ಪ ಬಿನ್ ರಂಗಯ್ಯ ಎಂತಲೂ ಕರೆಯುತ್ತಾರೆ ಹಾಗೂ

ಸದರಿಯವರು ತಿ.ನರಸೀಪುರದ ಶ್ರೀರಾವಪುರದ ನಿವಾಸಿಗಳು ಆಗಿರುತ್ತಾರೆ ಎಂದರೆ ಸರಿ. ನಾನು ಶ್ರೀನಿವಾಸರವರನ್ನು ಮದುವೆಯಾಗಿ 34 ವರ್ಷಗಳಾಗಿರುತ್ತವೆ. ನಾನು ಮದುವೆ ಕಾಲದಿಂದಲೂ ಪ್ರತಿವಾದಿಯು ತಮ್ಮ ಗುಡಿಸಿನಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಅಕ್ಕರವರು ಹೊಟ್ಟೆ ಜವರಪ್ಪರವರಿಂದ ಸದರಿ ಗುಡಿಸಿಲನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾವು 2017 ರಲ್ಲಿ ಮನೆಯನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ವಾಸ ಮಾಡುತ್ತಿರುವ ಏರಿಯಾ ಹಾಗೂ ದಾವಾ ಆಸ್ತಿಯಲ್ಲಿ ಸಿಮೆಂಟ್ ರಸ್ತೆ ನಿರ್ಮಾಣವಾಗಿರುತ್ತದೆ ಎಂದರೆ ಸರಿ. ಸದರಿ ಸಿಮೆಂಟ್ ರಸ್ತೆ ಮಾಡುವ ಕಾಲದಲ್ಲಿ ಪ್ರತಿವಾದಿಯು ಒತ್ತುವರಿ ಮಾಡಿಕೊಂಡು ಗುಡಿಸಿಲು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪುರಸಭೆಯವರು ರಸ್ತೆ ಮಾಡುವ ಸಮಯದಲ್ಲಿ ಅಳತೆ ಕಾರ್ಯ ಮಾಡಿದ್ದಾಗ ನಾವು ಪಶ್ಚಿಮ ದಿಕ್ಕಿನಲ್ಲಿ 1 ಅಡಿ ಒತ್ತುವರಿ ಮಾಡಿರುವುದು ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಾವು ನಮ್ಮ ಮನೆಯ ಉತ್ತರದ ಗೋಡೆಯನ್ನು ಒತ್ತುವರಿ ಮಾಡಿ ಅವರ ಮನೆಯ ಮುಂದೆ ಗೋಡೆ ಕಟ್ಟಿರುವ ಕಾರಣ ಪ್ರತಿವಾದಿಗಳಿಗೆ ಗಾಳಿ ಹಾಗೂ ಬೆಳಕಿನ ಅಭಾವ ಆಗಿರುತ್ತದೆ ಎಂದರೆ ಸರಿಯಲ್ಲ. ನಾವು 1 ಅಡಿ ಜಾಗವನ್ನು ಒತ್ತುವರಿ ಮಾಡಿ ಕಂಪೌಡ ಗೋಡೆ ಕಟ್ಟಿರುವ ಕಾರಣ ನಾವು ನಮ್ಮ ಮನೆಯ ಪಶ್ಚಿಮ ದಿಕ್ಕಿನಲ್ಲಿ ಸೆಟ್ ಬ್ಯಾಕ್ ಜಾಗವನ್ನು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ಯಾವ ಜಾಗವನ್ನು ಒತ್ತುವರಿ ಮಾಡಿ ತಿರುಗಾಡುವ ರಸ್ತೆಗೆ ಯಾವುದೇ ರೀತಿ ತಂಟೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸೇರಿದ 1 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡು ಅದನ್ನು ಲಪಟಾಯಿಸುವ ಕಾರಣದಿಂದ ನಾನು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ -ಡಿ ಷೆಡ್ಯೂಲ್ ಆಸ್ತಿಯು 3 ನೇ ವಾದಿಗೆ ಸೇರಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 3 ನೇ ವಾದಿಯನ್ನು ಈ ದಾವೆಯಲ್ಲಿ ಸಾಕ್ಷಿದಾರನ್ನಾಗಿ ಮಾಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾವು ವಾಸವಿ ಮಂದಿರದ ರಸ್ತೆ ಪ್ರಾರಂಭದಿಂದ ಮುರುಗನ್ ಟಾಕೀಸ್ ವರೆಗೆ ಸುಮಾರು 20 ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಸವಾಗಿರುವ ಬೇರೆ ನಿವಾಸಿಗಳನ್ನು ನಾನು ಈ

ದಾವೆಯನ್ನು ಹೂಡುವಂತೆ ಕೇಳಿಕೊಂಡಿರುವುದಿಲ್ಲ. ಅದೇ ರೀತಿ ನಿಪಿ-8 ಅರ್ಜಿದಾರರುಗಳನ್ನು ಈ ದಾವೆಯಲ್ಲಿ ವಾದಿಗಳನ್ನಾಗಿ ಸೇರಿಸಿರುವುದಿಲ್ಲ. ಪ್ರತಿವಾದಿಯು ಗಾಳಿ-ಬೆಳಕಿಗಾಗಿ ಹಾಗೂ ತಿರುಗಾಡುವ ರಸ್ತೆಗೆ ಆದರೂ ಯಾವುದೇ ತೊಂದರೆ ಮಾಡದಿದ್ದರೂ ಸಹ ನಾನು ಸುಳ್ಳು ದಾವೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**